ಇಂಟರ್‌ಮೀಡಿಯೆಟ್ ಪಂಪ್‌ಗೆ ವಿದ್ಯುತ್ ಸಂಪರ್ಕವನ್ನು ಆದ್ಯತೆ ಮೇಲೆ ಪಡೆದುಕೊಂಡು 2 ವಾರದೊಳಗಾಗಿ ಗ್ರಾಮಕ್ಕೆ ಸಮರ್ಪಕ ನೀರು ಸರಬರಾಜು ವ್ಯವಸ್ಥೆ ಕಲ್ಪಿಸಲು ಕ್ರಮ ತೆಗೆದುಕೊಳ್ಳಾಗುತ್ತಿದೆ.

ಸೇಡಂ ಕ್ಷೇತ್ರದಲ್ಲಿ ಕುಡಿಯುವ ನೀರಿನ ವ್ಯೆವಸ್ಥೆ

1447(1564) ಶ್ರೀ ಬಸವಂತರೆಡ್ಡಿ ಮೊತಕಪಲ್ಲಿ (ಸೇಡಂ): ಮಾನ್ಯ ಗ್ರಾಮೀಣ ನೀರು ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಗುಲ್ಬರ್ಗಾ ಜಿಲ್ಲೆಯ ಸೇಡಂ ಕ್ಷೇತ್ರ (ಚಿತ್ತಾಪುರ ತಾಲ್ಲೂಕಿನ 11 ಹಳ್ಳಿ 18 ತಾಂಡಾಗಳು ಸೇರಿ)ದಲ್ಲಿ ಜಿಲ್ಲಾ ಪಂಚಾಯತ್ ಇಂಜಿನೀಯರ್ ವಿಭಾಗದವರು ಅಭಾವ ಸಮಯದಲ್ಲಿ ಕುಡಿಯುವ ನೀರಿನ ತೊಂದರೆ ನಿವಾರಿಸಲು ಜಿಲ್ಲಾಧಿಕಾರಿಯವರಿಗೆ ವರದಿ ಸಲ್ಲಿಸಿರುವರೇ; ಸಲ್ಲಿಸಿದ್ದರೆ, ಅವುಗಳ ವಿವರ; ಅಂದಾಜು ವೆಚ್ಚ ಎಷ್ಟು;

ಆ. ಇಲ್ಲಿಯವರೆಗೆ ಬಿಡುಗೆಯಾಗಿರುವ ಹಣ ಎಷ್ಟು; ಈ ಹಣದಿಂದ ಕ್ಷೇತ್ರದ ಯಾವ ಯಾವ ಗ್ರಾಮಗಳಲ್ಲಿ ಕುಡಿಯುವ ನೀರಿನ ವ್ಯವಸ್ಥೆಗಾಗಿ ಖರ್ಚು ಮಾಡಲಾಗಿದೆ; (ಗ್ರಾಮವಾರು, ಕೆಲಸವಾರು ವಿವರ ಒದಗಿಸುವುದು)

ಇ. ಸದ್ಯಕ್ಕೆ ಯಾವ ಯಾವ ಗ್ರಾಮಗಳಲ್ಲಿ ಕುಡಿಯುವ ನೀರಿನ ತೊಂದರೆಯುಂಟಾಗಿದೆ; ಕೈಗೊಂಡಿರುವ ಕ್ರಮವೇನು?

ಶ್ರೀ ಕೆ.ಬಿ. ಕೋಳಿವಾಡ್ (ಗ್ರಾಮೀಣ ನೀರು ಸರಬರಾಜು ಸಚಿವರು)

ಅ. ಸೇಡಂ ಕ್ಷೇತ್ರದ ಒಟ್ಟು 14 ಸಮಸ್ಯಾತ್ಮಕ ಗ್ರಾಮಗಳ ವಿವರಗಳನ್ನು ಗುಲ್ಬರ್ಗಾ ಜಿಲ್ಲಾ ಪಂಚಾಯತಿಯು ಜಿಲ್ಲಾಧಿಕಾರಿಗಳಿಗೆ ಒದಗಿಸಿರುತ್ತವೆ. ಅವುಗಳ ವಿವರಗಳನ್ನು ಅನುಬಂಧ- 1 ರಲ್ಲಿ ನೀಡಲಾಗಿದೆ.

ಆ. ಗ್ರಾಮವಾರು ವಿವರಗಳನ್ನು ಅನುಬಂಧ-1ರಲ್ಲಿ ನೀಡಲಾಗಿದೆ.

ಇ. ಯಾದಗಿರಿ ವಿಭಾಗದ 8 ಗ್ರಾಮಗಳಲ್ಲಿ ಕುಡಿಯುವ ನೀರಿನ ತೀವ್ರ ಸಮಸ್ಯೆಯುಂಟಾಗಿದ್ದು, ಅಗತ್ಯ ದುರಸ್ತಿ ಹಾಗೂ ಪೈಪ್‌ಲೈನ್ ಕಾಮಗಾರಿಗಳನ್ನು ಆದ್ಯತೆ ಮೇಲೆ ಅನುಷ್ಠಾನಗೊಳಿಸಲಾಗುತ್ತಿದೆ.

ಅನುಬಂಧ 1

ಸೇಡಂ ಕ್ಷೇತ್ರ ಸಮಸ್ಯಾತ್ಮಕ ಗ್ರಾಮಗಳ ಕುಡಿಯುವ ನೀರಿನ ಕಾಮಗಾರಿಗಳ ಅನುಷ್ಠಾನದ ವಿವರ:

ಜಿಲ್ಲಾಧಿಕಾರಿಗಳಿಗೆ ನೀಡಿದ ಪಟ್ಟಿ (ರೂ. ಲಕ್ಷಗಳಲ್ಲಿ)

ಕ್ರಮ ಸಂಖ್ಯೆ	ಗ್ರಾಮ	ಕಾಮಗಾರಿ	ಅಂದಾಜು	ಬಿಡುಗಪಡೆಯಾದ ಅನುದಾನ: ವೆಚ್ಚ
1	2	3	4	5
	ಗುಲ್ಬರ್ಗಾ ವಿಭಾಗ			
1.	ಸುಂಕನೂರ	ಪೈಪ್‌ಲೈನ್ ರಿಪೇರಿ	0.75	0.30
2.	ರಾಜೋಳ	4.ಕಿ.ಮಿ. ಪೈಪ್‌ಲೈನ್	1.00	0.70
3.	ದಂಡಗುಂಡ	ಪೈಪ್‌ಲೈನ್	0.50	0.75

1	2	3	4	5
4.	ಹಿರೇಮಣಿ ತಾಂಡಾ	ಪೈಪ್‌ಲೈನ್ ದುರಸ್ತಿ	0.25	0.30
5.	ಆಲೂರ (ಬಿ)	ತೆರೆದಬಾವಿ ರಿಪೇರಿ	0.25	0.20
6.	ಆಲೂರ (ಬಿ)	ಕೊರಕಲ ಬಾವಿ ದುರಸ್ತಿ	0.25	0.20
	ಯಾದಗಿರಿ ವಿಭಾಗ			
1.	ಕೊಂಕನಳ್ಳಿ	ಜಲಮೂಲ ಹಾಗೂ ರೈಸಿಂಗ್‌ಮೇನ್ ಕೆಲಸ	1.50	0.50
2.	ತುರನೂರ	ಜಲಮೂಲ ಹಾಗೂ ರೈಸಿಂಗ್‌ಮೇನ್ ಕೆಲಸ	1.50	
3.	ಮಳಖೇಡ	ಜಲಮೂಲ ಹಾಗೂ ರೈಸಿಂಗ್‌ಮೇನ್ ಕೆಲಸ	2.00	
4.	ಮುಷ್ಟಳ್ಳಿ	ಜಲಮೂಲ ಹಾಗೂ ರೈಸಿಂಗ್‌ಮೇನ್ ಕೆಲಸ	0.75	0.50
5.	ಸುಂದರಕಿ	ಜಲಮೂಲ ಹಾಗೂ ರೈಸಿಂಗ್‌ಮೇನ್ ಕೆಲಸ	1.70	
6.	ಇಟಕಾಲ್ ತಾಂಡಾ	ಜಲಮೂಲ ಹಾಗೂ ರೈಸಿಂಗ್‌ಮೇನ್ ಕೆಲಸ	1.00	0.50
7.	ಇಜೆಪಲ್ಲಿ	ಜಲಮೂಲ ಹಾಗೂ ರೈಸಿಂಗ್‌ಮೇನ್ ಕೆಲಸ	0.80	
8.	ಮಲ್ಲಾಬಾದ	ಜಲಮೂಲ ಹಾಗೂ ರೈಸಿಂಗ್‌ಮೇನ್ ಕೆಲಸ	0.75	
	ಇತರ ಸಮಸ್ಯಾತ್ಮಕ ಗ್ರಾಮಗಳು:			
1.	ಶಂಕರಾಜಪೂರ	ಜಲಮೂಲ		0.20
2.	ತೋಳ್ಮಡಿ	ಜಲಮೂಲ		0.20
3.	ರಾಕಾಲ	ಜಲಮೂಲ ಹಾಗೂ ರೈಸಿಂಗ್‌ಮೇನ್ ಕೆಲಸ		1.50
4.	ಯಾನಗುಂದಿ	ಜಲಮೂಲ ಹಾಗೂ ರೈಸಿಂಗ್‌ಮೇನ್ ಕೆಲಸ		0.50

ಕೆ.ಆರ್. ನಗರ ತಾಲ್ಲೂಕು ಚುಂಚನಕಟ್ಟೆ ಗ್ರಾಮದಲ್ಲಿ ಪದವಿಪೂರ್ವ ಕಾಲೇಜು ಸ್ಥಾಪನೆ

1448(1561) ಹೆಚ್.ಸಿ. ಬಸವರಾಜು (ಪಿರಿಯಾಪಟ್ಟಣ): ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಕೆ.ಆರ್. ನಗರ ತಾಲ್ಲೂಕು, ಚುಂಚನಕಟ್ಟೆ ಹೋಬಳಿಗೆ ಸೇರಿದ ಚುಂಚನಕಟ್ಟೆ ಗ್ರಾಮದಲ್ಲಿ ಪದವಿ ಪೂರ್ವ ಕಾಲೇಜು ಪ್ರಾರಂಭಿಸಲು ಸರ್ಕಾರಕ್ಕೆ ಪ್ರಸ್ತಾವನೆ ಬಂದಿದೆಯೇ?